# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 608 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 12.03.2025 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ವಿವರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಯ ಪ್ರದೇಶದಲ್ಲಿ ಕೃಷ್ಣಾ ನದಿಯ ಮಹಾಪೂರದಿಂದ ಕಂಕನವಾಡಿ ನಡುಗಡ್ಡೆಯ ಜನರಿಗೆ ಪ್ರಯಾಣಕ್ಕೆ ಹಾಗೂ ಸದರಿ ಭಾಗದಲ್ಲಿ ಬೆಳೆದ ಕಬ್ಬು ಹಾಗೂ ಇತರೆ ಬೆಳೆಗಳನ್ನು ಸಾಗಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? | ಹೌದು, ಸರ್ಕಾರದ ಗಮನಕ್ಕೆ ಬಂದಿದೆ.<br><br>ಪ್ರಸ್ತುತ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಗೆ ಜನ ಮತ್ತು ಬೈಕ್‌ಗಳನ್ನು ಸಾಗಿಸಲು ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿ ವಿಭಾಗ, ನಂಬರ್-3 ಕಡಕೋಳ, ಜಮಖಂಡಿ ರವರು, 02 ಅಲ್ಯೂಮಿನಿಯಂ ಯಾಂತ್ರಿಕ ನಾವೆಗಳನ್ನು ಪೂರೈಸಿದ್ದು, ಸದರಿ ನಾವೆಗಳನ್ನು ಕಂಕನವಾಡಿ ಗ್ರಾಮ ಪಂಚಾಯತಿ ವತಿಯಿಂದ ನಿರ್ವಹಿಸಲಾಗುತ್ತಿದೆ. |
| ಆ) | ಸದರಿ ನಡುಗಡ್ಡೆಯ ಪ್ರದೇಶದಲ್ಲಿ ದೊಡ್ಡ ದೋಣಿಯನ್ನು ನೀಡಲು ಇರುವ ಅಡಚಣೆಗಳೇನು; ಸೂಕ್ತ ಕಾರಣಗಳಿಂದ ವಿವರಿಸಿ ಮತ್ತು ಎಲ್‌ಸಿಟಿ ಬಾರ್ಜ/ಮಿನಿ ಎಲ್‌ಸಿಟಿ ಬಾರ್ಜ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ; ಯಾವ ಕಾಲಮಿತಿಯೊಳಗೆ ನೀಡಲಾಗುವುದು; | ಸದರಿ ನಡುಗಡ್ಡೆಯ ಪ್ರದೇಶದಲ್ಲಿ ದೊಡ್ಡ ದೋಣಿ ಸೌಕರ್ಯ ಕಲ್ಪಿಸಲು ಯಾವುದೇ ಅಡಚಣೆ ಇರುವುದಿಲ್ಲ.<br><br>ಹೌದು, ಎಲ್‌ಸಿಟಿ ಬಾರ್ಜ್ / ಮಿನಿ ಎಲ್.ಸಿ.ಟಿ ಬಾರ್ಜ್ ನೀಡುವ ಚಿಂತನೆ ಸರ್ಕಾರದ ಮುಂದಿದೆ. ಅನುದಾನದ ಲಭ್ಯತೆಗೆ ಒಳಪಟ್ಟು ಕಂಕನವಾಡಿ ನಡುಗಡ್ಡೆಗೆ ಉದ್ದ 15ಮೀ. X ಅಗಲ 6 ಮೀ.ನ ಎಲ್.ಸಿ.ಟಿ ಬಾರ್ಜ್‌ನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. |
| ಇ) | ಕಂಕನವಾಡಿ ನಡುಗಡ್ಡೆಗೆ ರಸ್ತೆ ಸಂಪರ್ಕ ಇರದ ಕಾರಣ ಹಾಗೂ ರೈತರ ಹಿತದೃಷ್ಟಿಯಿಂದ ದೊಡ್ಡ ಎಲ್‌ಸಿಟಿ ಬಾರ್ಜ/ಮಿನಿ ಎಲ್‌ಸಿಟಿ ಬಾರ್ಜ ನೀಡಿ ರೈತರ ಹಿತ ಕಾಪಾಡಲು ಸರ್ಕಾರದ ನಿಲುವೇನು; | ಹೌದು, ಸರ್ಕಾರದ ಗಮನಕ್ಕೆ ಬಂದಿದೆ.<br><br>ರೈತರ ಹಿತವನ್ನು ಕಾಪಾಡಲು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ಗ್ರಾಮಕ್ಕೆ ಹೆಚ್ಚುವರಿ ಬೋಟ್ (ಉದ್ದ15 ಮೀ. X ಅಗಲ 6 ಮೀ. ಸಾಮರ್ಥ್ಯ- 30 passengers, 1 Truck, 2 Four wheelers, ಮತ್ತು 12 Two wheelers, ಇಂಜಿನ್ ಸಾಮರ್ಥ್ಯ- 2 x 120 HP) ಅಂದಾಜು ರೂ. 350.00 ಲಕ್ಷಗಳ ವೆಚ್ಚದಲ್ಲಿ ಒದಗಿಸಲು ಉದ್ದೇಶಿಸಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಈ) | ಈ ನಡುಗಡ್ಡೆಯ ರೈತರು ತಾವು ಬೆಳೆದ ಬೆಳೆಗಳನ್ನು ಸಾಗಿಸಲು ನದಿ ದಾಟಿ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ; ಬಂದಿದ್ದರೆ, ಈ ಕುರಿತು ಸರ್ಕಾರದ ಸ್ಪಷ್ಟನೇ ಏನು? (ವಿವರ ನೀಡುವುದು) | |

IDD 13 BNS 2025

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**